| | |
|---|---|
| | ಮಾನದಂಡಗಳ ಪ್ರಕಾರ ಅನುಮತಿ ನೀಡಲಾಗುವುದು. ಲೇಬಲ್‌ನ ಕರಡು ಪ್ರತಿಗಳನ್ನು ಸಾವಯವ ಪ್ರಮಾಣನ ಸಂಸ್ಥೆಗೆ ಪರಿಶೀಲನೆಗಾಗಿ ನೀಡುವುದು ಹಾಗೂ ಮುದ್ರಣಕ್ಕೆ ಮುಂಚಿತವಾಗಿ ಅನುಮೋದನೆ ಪಡೆಯುವುದು. |
| ದೂರುಗಳು ಮತ್ತು ಮೇಲ್ಮನವಿ (Appeals) | ಅರ್ಜಿದಾರರು ಸಾವಯವ ಪ್ರಮಾಣನ ಸಂಸ್ಥೆ ಅಥವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಅಥವಾ ಪ್ರಮಾಣೀಕರಣ ನಿರ್ಧಾರ ಇತರೆ ಯಾವುದೇ ವಿಷಯಗಳ ಬಗ್ಗೆ ಸಾವಯವ ಪ್ರಮಾಣನ ಸಂಸ್ಥೆಗೆ ಲಿಖಿತವಾಗಿ ದೂರನ್ನು ದಾಖಲಿಸಬಹುದು. ಅರ್ಜಿದಾರರು ಸಾವಯವ ಪ್ರಮಾಣನ ಸಂಸ್ಥೆಯ ಪ್ರಮಾಣೀಕರಣ ನಿರ್ಧಾರದ ಬಗ್ಗೆ ದೂರುಗಳು ಇದ್ದಲ್ಲಿ ಸದರಿಯವರು ಸಾವಯವ ಪ್ರಮಾಣನ ಸಂಸ್ಥೆಯ ಮೇಲ್ಮನವಿ ಸಮಿತಿಗೆ ಲಿಖಿತವಾಗಿ ನಿಗದಿತ ಶುಲ್ಕದೊಂದಿಗೆ ಪ್ರಮಾಣೀಕರಣ ನಿರ್ಧಾರ ಪ್ರಕಟವಾದ 21 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸುವುದು. ಮೇಲ್ಮನವಿ ಸಮಿತಿಯು ಎಲ್ಲಾ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ತನ್ನ ನಿರ್ಧಾರವನ್ನು ತೆಗೆದು ಕೊಳ್ಳುತ್ತದೆ. ಎಲ್ಲಾ ದೂರುಗಳನ್ನು ಹಾಗೂ ಅಪೀಲುಗಳನ್ನು ಸಾವಯವ ಪ್ರಮಾಣನ ಸಂಸ್ಥೆಯು ಗೌಪ್ಯವಾಗಿಡುತ್ತದೆ. |
| ರಾಷ್ಟ್ರೀಯ ಸಾವಯವ ಕೃಷಿ ಉತ್ಪಾದನೆಯ ಮಾನದಂಡಗಳು | ರಾಷ್ಟ್ರೀಯ ಸಾವಯವ ಕೃಷಿ ಉತ್ಪಾದನಾ ಮಾನದಂಡಗಳನ್ನು (NSOP) ಅಂತರ್ಜಾಲದ www.apeda.com ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. |



ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಸಾವಯವ ಪ್ರಮಾಣೀಕರಣದ ಅವಶ್ಯಕತೆ

ಹಸಿರು ಕ್ರಾಂತಿ ಪ್ರಾರಂಭವಾಗುವುದಕ್ಕೂ ಮೊದಲೇ ಪೂರ್ವ ಯಾವುದೇ ರಾಸಾಯನಿಕ ಗೊಬ್ಬರ ಮತ್ತು ರಾಸಾಯನಕ ಕೀಟ, ರೋಗ ಹಾಗೂಕಳೆನಾಶಕಗಳನ್ನು ಬಳಸದೆ ಕೃಷಿಯನ್ನು ಮಾಡಲಾಗುತ್ತಿತ್ತು. ಇಂತಹ ಕೃಷಿಯಿಂದ ಉತ್ಪಾದಿಸಿದ ಆಹಾರ ಪದಾರ್ಥಗಳುರುಚಿಯಾಗಿ, ಹೆಚ್ಚು ಪೋಷಕಾಂಶಗಳಿಂದ ಕೂಡಿರುತ್ತಿದ್ದವು ಹಾಗೂ ಈ ಕೃಷಿ ಪದ್ಧತಿಯಿಂದ ಪರಿಸರಕ್ಕೆ ಹಾನಿ ಉಂಟಾಗದೆ, ಪರಿಸರಸ್ನೇಹಿಯಾಗಿ ಹೊಂದಿಕೊಂಡು ಸಾಗುತ್ತಿತ್ತು.

ಜನಸಂಖ್ಯೆ ಬೆಳೆದಂತೆ ಆಹಾರದ ಹೆಚ್ಚಿನ ಅವಶ್ಯಕತೆಯುಂಟಾಗಿ ಆಹಾರದ ಅಭಾವ ಸೃಷ್ಟಿಯಾಗುತ್ತಾ ಹೋಯಿತು. ಇದಕ್ಕೆ ಪರಿಹಾರವೆಂಬಂತೆ ಹಾಗೂ ಅವಶ್ಯಕತೆಗೆ ತಕ್ಕಂತೆ ಆಹಾರೋತ್ಪನ್ನವು 1960ನೇ ಸಾಲಿನಲ್ಲಿ ಹೆಚ್ಚಿನ ಇಳುವರಿಯನ್ನುಕೊಡುವ ತಳಿಗಳಿಗೆ ಬೇಕಾಗುವಂತೆ ರಾಸಾಯನಿಕ ಗೊಬ್ಬರ/ಕೀಟ, ರೋಗ ಮತ್ತು ಕಳೆನಾಶಕಗಳನ್ನು ಬಳಸಿ ಹೆಚ್ಚು ಇಳುವರಿಯನ್ನು ತೆಗೆಯುವುದರ ಮೂಲಕ ಹಸಿರುಕ್ರಾಂತಿಯನ್ನು ಪ್ರಾರಂಭಿಸಲಾಯಿತು. ಹಸಿರು ಕ್ರಾಂತ್ರಿಯಿಂದ ಆಹಾರದ ಅಭಾವ ನೀಗಿತ್ತಾದರೂ ರಾಸಾಯನಿಕ ಗೊಬ್ಬರ ಹಾಗೂ ಇತ್ಯಾದಿ ಬಳಕೆಯಿಂದ ಕೃಷಿ ಭೂಮಿಯು ತನ್ನ ಫಲವತ್ತತೆಯನ್ನು ಕಳೆದುಕೊಂಡಿರುವುದಲ್ಲದೇ ಕಲುಷಿತಗೊಳ್ಳುತ್ತಿದೆ. ಇದರ ಜೊತೆ ಅಂರ್ತಜಲ ಹಾಗೂ ವಾತಾವರಣ ಕಲುಷಿತಗೊಂಡು ಜಾನುವಾರು ಹಾಗೂ ಮನುಷ್ಯನ ದೈನಂದಿನ ಜೀವನ ಹಾಗೂ ಆರೋಗ್ಯದಲ್ಲಿ ಏರುಪೇರು ಕಂಡುಬಂದಿರುತ್ತದೆ. ಇದನ್ನು ಮನಗಂಡು ಇತ್ತೀಚಿನ ದಿನಗಳಲ್ಲಿ ನಾಗರೀಕರಲ್ಲಿ ಕೃಷಿ ಭೂಮಿ, ವಾತಾವರಣ, ಜಾನುವಾರು ಹಾಗೂ ಮನುಷ್ಯನ ಆರೋಗ್ಯದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ಜಾಗೃತಿಯುಂಟಾಗಿ ಮತ್ತೆ ಹಿಂದೆ ಮಾಡುತ್ತಿದ್ದ ಪರಿಸರ ಮತ್ತು ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮವಿಲ್ಲದ ಸಾವಯವ ಕೃಷಿಯು ಅವಶ್ಯಕತೆಯನ್ನು ಪುನರಾರಂಭಿಸುವುದು ಸೂಕ್ತವೆಂದು ಮನಗಂಡು ಸಾವಯವ ಕೃಷಿ ಕೈಗೊಳ್ಳುವುದರ ಕಡೆಗೆ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ.

ಆದಕಾರಣ ನಾಗರೀಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿಯುಂಟಾಗಿ ಆಹಾರ ಸೇವಿಸಲು ಸಾವಯವ ಪದಾರ್ಥಗಳನ್ನು ಕೊಂಡು ಬಳಸುತ್ತಿದ್ದಾರೆ. ಆದರೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಸಾವಯವ ಪದಾರ್ಥಗಳು ನಿಜವಾಗಿ ಸಾವಯುವ ಪದಾರ್ಥಗಳೇ ಅಥವಾ ಕೃತ್ರಿಮವಾದುವೆ ಎಂದು ಖಾತ್ರಿಯಿರುವುದಿಲ್ಲ ಇದಕ್ಕೆ ಪರಿಹಾರವಾಗಿ ಖಾತರಿಪಡಿಸಲು ಪ್ರಮಾಣೀಕರಣವು ಅತ್ಯವಶ್ಯಕವಿರುತ್ತದೆ.

**ಸಾವಯವ ಪ್ರಮಾಣೀಕರಣದ ಪ್ರಯೋಜನಗಳು**

- ಸಾವಯವ ಉತ್ಪಾದಕರಿಗೆ ಉತ್ತಮ ಬೆಲೆ
- ಗ್ರಾಹಕರಿಗೆ ವಿಶ್ವಾಸಾರ್ಹ ಪ್ರಮಾಣಿತ ಸಾವಯವ ಉತ್ಪನ್ನಗಳ ಲಭ್ಯತೆ
- ನೂತನ ಸಾವಯವ ತಂತ್ರಜ್ಞಾನ ಹಾಗೂ ವಿಧಾನಗಳ ಪರಿಚಯ
- ಸಾವಯವ ಉತ್ಪನ್ನಗಳನ್ನು ರಫ್ತು ಮಾಡಲು ಸಹಕಾರಿ

**ಸಾವಯವ ಪ್ರಮಾಣನ ಕಾರ್ಯವಿಧಾನ**

| | |
|---|---|
| ಸಾವಯವ ಪ್ರಮಾಣನ ಸಂಸ್ಥೆಯಿಂದ ಅರ್ಜಿ ಪಡೆಯುವುದು. | ಅರ್ಜಿದಾರರು, (ರೈತರು/ರೈತರಗುಂಪು/ಸಂಸ್ಕರಣೆಗಾರರು/ಉದ್ದಿಮೆದಾರರು) ಸಾವಯವ ಪ್ರಮಾಣೀಕರಣಕ್ಕಾಗಿ ನೊಂದಾಯಿಸಿಕೊಳ್ಳಲು ಖುದ್ದಾಗಿ/ ದೂರವಾಣಿ/ ಇ–ಮೇಲ್ ಅಥವಾ ಅಂಚೆ ಮೂಲಕ ಕೋರಿಕೆ ಸಲ್ಲಿಸುವುದು. |
| ಅರ್ಜಿಯ ಜೊತೆಗೆ ಇತರೆ ಮಾಹಿತಿ ಪ್ರತಿಗಳು (Application Package) | ಅರ್ಜಿ ನಮೂನೆ ಜೊತೆಯಲ್ಲಿ ಆಗ್ಗಿಂದಾಗೆ ಕೇಳುವ ಪ್ರಶ್ನೆಗಳು (FAQ), ಸಾವಯವ ಪ್ರಮಾಣೀಕರಣ ಕಾರ್ಯವಿಧಾನ (Procedure), ಸೇವಾಶುಲ್ಕ (Scale of Fee) ಹಾಗೂ ಕರಾರು ಪತ್ರವನ್ನು ಅರ್ಜಿದಾರರಿಗೆ ಕಳುಹಿಸಲಾಗುವುದು. |
| ಭರ್ತಿಮಾಡಿದ ಅರ್ಜಿ ಸಲ್ಲಿಸುವುದು | ಅರ್ಜಿಯಲ್ಲಿರುವ ಎಲ್ಲಾ ವಿವರಗಳನ್ನು ಭರ್ತಿಮಾಡಿ, ಸಹಿಯೊಂದಿಗೆ ನೋಂದಣಿಗಾಗಿ ಸಾವಯವ ಪ್ರಮಾಣನ ಸಂಸ್ಥೆಗೆ ಸಲ್ಲಿಸುವುದು. |



| | |
|---|---|
| ಪ್ರಮಾಣೀಕರಣ | ಬಾಕಿ ಇರುವ ಎಲ್ಲಾ ಸೇವಾ ಶುಲ್ಕವು ಸಂಸ್ಥೆಗೆ ಪಾವತಿಯಾದ ನಂತರ ನಿರೀಕ್ಷಣಾ ವರದಿಯಲ್ಲಿ ಸೂಚಿಸಿದ ನ್ಯೂನತೆಗಳನ್ನು (NCs) ರೈತರು ಸರಿಪಡಿಸಿರುವುದನ್ನು ಖಾತರಿಪಡಿಸಿಕೊಂಡು ಮೌಲ್ಯಮಾಪಕರು ನಿರೀಕ್ಷಣಾ ವರದಿಯನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಮುಂದಿನ ಕ್ರಮಕ್ಕಾಗಿ "ಪ್ರಮಾಣನ ಸಮಿತಿ"ಗೆ ಸಲ್ಲಿಸುವರು. ನಿರೀಕ್ಷಣಾ ವರದಿಯಲ್ಲಿ ಸೂಚಿಸಿರುವ ನ್ಯೂನತೆಗಳನ್ನು (NCಗಳನ್ನು) ಸರಿಪಡಿಸಿದ ಆಧಾರದ ಮೇಲೆ ಪ್ರಮಾಣೀಕರಣ ಸಮಿತಿಯು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. |
| ಟ್ರೇಸ್‌ನೆಟ್‌ನಲ್ಲಿ ಪ್ರಮಾಣನ ಪತ್ರ ತಯಾರಿಸುವುದು | ಸಾವಯವ ಪ್ರಮಾಣನ ಸಂಸ್ಥೆಯ, ಕ್ವಾಲಿಟಿ ಮ್ಯಾನೇಜರ್‌ರವರು ಟ್ರೇಸ್‌ನೆಟ್ ಮುಖಾಂತರ ಪ್ರಮಾಣ ಪತ್ರವನ್ನು ತೆಗೆದು ಅರ್ಜಿದಾರರಿಗೆ ಕಳುಹಿಸುವರು. |
| ಪ್ರಮಾಣನ ಪತ್ರ ಮತ್ತು ಸಾವಯವ ಪ್ರಮಾಣನ ಸಂಸ್ಥೆಯ ಚಿಹ್ನೆ | ಪ್ರಮಾಣನ ಪತ್ರದ ಸಿಂಧುತ್ವ ಅವಧಿಯು, ಪ್ರಮಾಣನ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಇರುತ್ತದೆ. ಕರ್ನಾಟಕ ರಾಜ್ಯ ಸಾವಯವ ಪಮಾಣನ ಸಂಸ್ಥೆಯು ಇದನ್ನು ನವೀಕರಿಸಲು ಅವಧಿಗೆ ಮುನ್ನ ಮೂರು ತಿಂಗಳು ಮುಂಚಿತವಾಗಿ ಅರ್ಜಿದಾರರಿಗೆ ನವೀಕರಣ ಅರ್ಜಿಯನ್ನು ಕಳುಹಿಸಲಾಗುವುದು. ಸಾವಯವ ಪ್ರಮಾಣನ ಸಂಸ್ಥೆ ಮತ್ತು ಇಂಡಿಯಾ ಆರ್ಗ್ಯಾನಿಕ್ ಲೋಗೋಗಳನ್ನು ಉಪಯೋಗಿಸಲು, ಆಪರೇಟರ್ ಮುಂಚಿತವಾಗಿ ಲಿಖಿತ ರೂಪದಲ್ಲಿ ಕೋರಿಕೆ ಸಲ್ಲಿಸಬೇಕು. ಪ್ರಮಾಣೀಕರಣ ಸಮಿತಿಯು ಪರಿಶೀಲಿಸಿದ ನಂತರ NSOP |

| | |
|---|---|
| ಸೇವಾ ಶುಲ್ಕದ ಆಹ್ವಾನ ಪತ್ರ ನೀಡುವುದು (Offer letter) | ಮೌಲ್ಯಮಾಪಕರು (Evaluator) ಅರ್ಜಿಯನ್ನು ಪರಿಶೀಲಿಸಿ, ಅಂಗೀಕರಿಸಿದ ನಂತರ ಆಹ್ವಾನ ಪತ್ರ (ನಿರೀಕ್ಷಣೆ ಹಾಗೂ ಪ್ರಮಾಣೀಕರಣಕ್ಕೆ ತಗಲುವ ಅಂದಾಜು ಶುಲ್ಕ) ಹಾಗೂ ಕರಾರು ಪತ್ರದ ಪ್ರತಿಯನ್ನು ಅರ್ಜಿದಾರರಿಗೆ ಕಳುಹಿಸಲಾಗುವುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಅರ್ಜಿ ತಿರಸ್ಕೃತಗೊಂಡರೆ ಈ ಮಾಹಿತಿಯನ್ನು ಅರ್ಜಿದಾರರಿಗೆ ತಿಳಿಸಲಾಗುವುದು |
| ಟ್ರೇಸ್‌ನೆಟ್‌ನಲ್ಲಿ ನೋಂದಣಿ (Tracenet entry) | ಅರ್ಜಿದಾರರ ವಿವರಗಳನ್ನು ಟ್ರೇಸ್‌ನೆಟ್‌ನಲ್ಲಿ ನೋಂದಾಯಿಸಲಾಗುವುದು. |
| ಸೇವಾಶುಲ್ಕ ಪಾವತಿ | ಅರ್ಜಿದಾರರು ನಿರೀಕ್ಷಣೆ ಹಾಗೂ ಪ್ರಮಾಣೀಕರಣಕ್ಕೆ ತಗಲುವ ಸೇವಾ ಶುಲ್ಕವನ್ನು ಮುಂಗಡವಾಗಿ ಪಾವತಿಸಬೇಕು. ಸಹಿ ಮಾಡಿದ ಕರಾರು ಪತ್ರವನ್ನು ಪ್ರಮಾಣನ ಸಂಸ್ಥೆಗೆ ಕಳುಹಿಸಬೇಕು. |
| ನಿರೀಕ್ಷಣೆ ದಿನಾಂಕ ನಿಗದಿ | ಸೇವಾ ಶುಲ್ಕ ಸ್ವೀಕೃತವಾದ ನಂತರ ಪ್ರಮಾಣನ ಸಂಸ್ಥೆಯು ಅರ್ಜಿದಾರರೊಂದಿಗೆ ಚರ್ಚಿಸಿ, ನಿರೀಕ್ಷಣಾ ದಿನಾಂಕವನ್ನು ನಿಗದಿಪಡಿಸಲಾಗುವುದು. ಈ ಮಾಹಿತಿ ಪತ್ರದ ಜೊತೆಯಲ್ಲಿ ಅರ್ಜಿದಾರರಿಗೆ NSOP ಮಾನದಂಡಗಳ ಪ್ರತಿ ಹಾಗೂ ಫಾರಂ ಡೈರಿಯನ್ನು ಕಳುಹಿಸಲಾಗುವುದು. |
| ನಿರೀಕ್ಷಣೆ | ನಿಗದಿಪಡಿಸಿದ ದಿನಾಂಕದಂದು NSOP ಮಾನದಂಡಗಳ ಪ್ರಕಾರ ನಿರೀಕ್ಷಣೆಯನ್ನು ಕೈಗೊಳ್ಳಲಾಗುವುದು ಹಾಗೂ ಪರಸ್ಪರ ಸಹಿ ಮಾಡಿದ ಕರಾರು ಪತ್ರದ ಪ್ರತಿಯನ್ನು ಅರ್ಜಿದಾರರಿಗೆ ನೀಡಲಾಗುವುದು. ಸಾವಯವ |



| | |
|---|---|
| | ಪ್ರಮಾಣನ ನಿರೀಕ್ಷಕರು, ನಿರೀಕ್ಷಣಾ ವರದಿಯ ಒಂದು ಪ್ರತಿಯನ್ನು ಸ್ಥಳದಲ್ಲೇ ಅರ್ಜಿದಾರರಿಗೆ ನೀಡಲಾಗುವುದು ಹಾಗೂ ವಿವರವಾದ ವರದಿಯನ್ನು ನಿರೀಕ್ಷಣೆ ಕೈಗೊಂಡ ನಂತರ ಮೌಲ್ಯಮಾಪಕರಿಗೆ (Evaluator) ಸಲ್ಲಿಸಲಾಗುವುದು. |
| ಬಾಕಿ ಶುಲ್ಕದ ಪಾವತಿ | ಅಂತಿಮ ವರದಿಯನ್ನು ನಿರೀಕ್ಷಣೆ ಕೈಗೊಂಡ 15 ದಿನಗಳ ಒಳಗಾಗಿ ಕಳುಹಿಸಲಾಗುವುದು. ಪ್ರಮಾಣೀಕರಣ ಕಾರ್ಯಕ್ಕೆ ತಗುಲಿದ ನಿಖರವಾದ ವೆಚ್ಚಗಳಿಗೆ ಅನುಗುಣವಾಗಿ ಅಂತಿಮ ಇನ್‌ವಾಯ್ಸ್ ತಯಾರಿಸಿ ರೈತರಿಗೆ ಕಳುಹಿಸಲಾಗುವುದು ಹಾಗೂ ಬಾಕಿ ಶುಲ್ಕವಿದ್ದಲ್ಲಿ ಸಂಸ್ಥೆಗೆ ಪಾವತಿಸುವುದು. |
| ಟ್ರೇಸ್‌ನೆಟ್‌ನಲ್ಲಿ ದಾಖಲು ಮಾಡುವುದು Tracenet entry | ರೈತರ ಕೃಷಿ ಕ್ಷೇತ್ರದ ಪ್ರಮಾಣೀಕರಣಕ್ಕೆ (Individual) ಸಂಬಂಧಿಸಿದಂತೆ, ನಿರೀಕ್ಷಣೆ ಸಮಯದಲ್ಲಿ ಕಂಡುಬಂದ ಪ್ರಧಾನ ಹಾಗೂ ಸಣ್ಣ ನ್ಯೂನತೆಗಳನ್ನು ಉಲ್ಲೇಖಿಸಿ ಈ ನ್ಯೂನತೆಗಳನ್ನು ಸರಿಪಡಿಸಲು ಸೂಕ್ತ ಕಾಲ ಮಿತಿಯನ್ನು ವಿಧಿಸಿ ವಿವರವಾದ ಬೆಳೆಯ ಪಟ್ಟಿಯನ್ನು ಟ್ರೇಸ್‌ನೆಟ್‌ನಲ್ಲಿ ದಾಖಲಿಸುವುದು. ರೈತರ ಗುಂಪಿನ ಪ್ರಮಾಣೀಕರಣಕ್ಕೆ (ICS) ಸಂಬಂಧಿಸಿದಂತೆ, ಟ್ರೇಸ್‌ನೆಟ್‌ನಲ್ಲಿ ದಾಖಲು ಮಾಡಿದ ವಿವರಗಳನ್ನು ಪ್ರಮಾಣನ ಸಂಸ್ಥೆಯು ಪರಿಶೀಲಿಸುವುದು, ಮತ್ತು ಪ್ರಧಾನ ಹಾಗೂ ಸಣ್ಣ ನ್ಯೂನತೆಗಳು ಕಂಡು ಬಂದಲ್ಲಿ ಅವುಗಳನ್ನು ಸರಿಪಡಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗುವುದು. |